ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಸವಕಲ್ಯಾಣ
C. C. No.840/2025

CW.2-PW.4

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:-ದಿನಾಂಕ: 17.03.2026

| | |
|---|---|
| ಸಾಕ್ಷಿಯ ಹೆಸರು:- | ರಾಜಕುಮಾರ |
| ತಂದೆ ಹೆಸರು :- | ಧೋಳಪ್ಪಾ |
| ವಯಸ್ಸು :- | 46 ವರ್ಷ |
| ಉದ್ಯೋಗ :- | ಒಕ್ಕಲುತನ |
| ವಾಸ ಸ್ಥಳ :- | ಬೇಲೂರ ಗ್ರಾಮ, ತಾ.ಬಸವಕಲ್ಯಾಣ |

<u>ಮುಖ್ಯ ವಿಚಾರಣೆ</u>**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಈ ಪ್ರಕರಣದ ಆರೋಪಿತರನ್ನು ಈ ಮುಂಚೆ ನಾನು ನೋಡಿರುವುದಿಲ್ಲ. ಸಾಕ್ಷಿ ನಿಪಿ.2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

*ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಲು ಎ.ಪಿ.ಪಿ., ರವರು ಅನುಮತಿ ಕೋರಿರುತ್ತಾರೆ, ಆ ಪ್ರಕಾರ ಅನುಮತಿ ನೀಡಲಾಯಿತು.*

<u>ಪಾಟೀ ಸವಾಲು</u> **:-**ಸಹಾಯಕ ಸರ್ಕಾರಿ ಅಭಿಯೋಜಕರಿಂದ

ದಿನಾಂಕ 29-03-2020 ರಂದು ಬೆಳಗ್ಗೆ 11-25 ರಿಂದ 12-25 ಗಂಟೆ ಸಮಯದಲ್ಲಿ ಬೇಲೂರು ಮುಚಲಾಂಬ ರಸ್ತೆಯ ಗುರುಲಿಂಗ್ ಶಿವಚಾರ್ಯ ಮಠದ ಬಳಿ ಆರೋಪಿತರ ವಶದಿಂದ 180 ಎಮ್.ಎಲ್.ಅಳತೆಯ ಒಟ್ಟು 25 ಓ.ಟಿ. ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳನ್ನು ನನ್ನ ಮತ್ತು ಚಾಸಾ.3 ಇವರ ಸಮಕ್ಷಮ ನಿಪಿ.2 ರಂತೆ ಪಂಚನಾಮೆ ಬರೆದು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-